**ಓ ಎಸ್ 73/2022 ಡಿಡಬ್ಲ್ಯೂ3**

**ಸಾಕ್ಷಿಯನ್ನು ದಿಃ 01.12.2025 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಎಂ ಎಸ್ ಪಿ ವಕೀಲರಿಂದಃ**

ನಾನು 8 ನೇ ತರಗತಿಯವರೆಗೆ ಓದಿದ್ದೇನೆ. ನಾನು ಮೊದಲು ಗುಮ್ಮನಹಳ್ಳಿಯಲ್ಲಿ ಕೂಲಿ ಕೆಲಸ ಮಾಡುತ್ತಿದ್ದೆ. ವಾದಿ ಇಂದ್ರಮ್ಮರವರ ಗಂಡನ ಹೆಸರು ಗೊತ್ತಿಲ್ಲ. ಪ್ರತಿವಾದಿ ನಾಗೇಗೌಡರ ತಂದೆ ತಾಯಿ ಹೆಸರು ತಿಮ್ಮೇಗೌಡ ಮತ್ತು ಲಕ್ಷಮ್ಮ. ಅವರಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿಲ್ಲ. ತಿಮ್ಮೇಗೌಡ ಮತ್ತು ಲಕ್ಷ್ಮಮ್ಮರವರಿಗೆ ಟಿ ನಾಗೇಗೌಡರ ಜೊತೆಯಲ್ಲಿ ರತ್ನಮ್ಮ ಮತ್ತು ಇಂದ್ರಮ್ಮ ಎಂಬ ಇಬ್ಬರು ಹೆಣ್ಣು ಮಕ್ಕಳು ಇದ್ದಾರೆ. ರತ್ನಮ್ಮರವರ ಗಂಡನ ಹೆಸರು ನನಗೆ ಗೊತ್ತಿಲ್ಲ.

ತಿಮ್ಮೇಗೌಡ ಮತ್ತು ಲಕ್ಷ್ಮಮ್ಮ ಬದುಕಿದ್ದಾಗ ಇಂದ್ರಮ್ಮ ಹಾಗೂ ರತ್ನಮ್ಮರವರಿಗೆ ಪಾಲು ನೀಡಿದಾದರೋ ಇಲ್ಲವೋ ನನಗೆ ಗೊತ್ತಿಲ್ಲ. ತಿಮ್ಮೇಗೌಡ ಮತ್ತು ಲಕ್ಷ್ಮಮ್ಮ ಎಷ್ಟು ವರ್ಷಗಳ ಹಿಂದೆ ತೀರಿಕೊಂಡರು ಎಂದು ನನಗೆ ಗೊತ್ತಿಲ್ಲ. ಟಿ ನಾಗೇಗೌಡ ಮತ್ತು ರತ್ನಮ್ಮ ಹಾಗೂ ಇಂದ್ರಮ್ಮರವರ ನಡುವೆ ವಿಭಾಗ ಆಗಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ.

ದಾವಾ ಆಸ್ತಿಗಳ ಸರ್ವೆ ನಂಬರು ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳ ಪೈಕಿ ಟಿ ನಾಗೇಗೌಡರ ಪಿತ್ರಾರ್ಜಿತ ಮತ್ತು ಸ್ವಯಾರ್ಜಿತ ಸ್ವತ್ತುಗಳು ಯಾವುವು ಎಂದು ನನಗೆ ಗೊತ್ತಿಲ್ಲ. ಟಿ ನಾಗೇಗೌಡರ ಮತ್ತು ಅವರ ಮಕ್ಕಳ ಯಾವುದೇ ಸ್ವಯಾರ್ಜಿತ ಸ್ವತ್ತುಗಳನ್ನು ಈ ದಾವಾ ಷೆಡ್ಯೂಲ್ ನಲ್ಲಿ ವಾದಿಯು ಸೇರಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ಟಿ ನಾಗೇಗೌಡರ ಮತ್ತು ವಾದಿಯ ಪಿತ್ರಾರ್ಜಿತ ಹಾಗೂ ಒಟ್ಟು ಕುಟುಂಬದ ಸ್ವತ್ತುಗಳನ್ನು ಮಾತ್ರ ವಾದಿಯು ಈ ದಾವೆಯಲ್ಲಿ ಸೇರಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರಿಕೆಯಲ್ಲಿನ ಎಲ್ಲಾ ಸಂಗತಿಗಳನ್ನು ತಿಳಿದುಕೊಂಡಿದ್ದೇನೆ. ದಾವಾ ಆಸ್ತಿಗಳ ಚಕ್ಕುಬಂದಿ ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳು ಮಳೆಯಾಧಾರಿತವಾಗಿದ್ದು ಅವುಗಳಿಂದ ಎಷ್ಟು ಆದಾಯ ಬರುತ್ತದೆ ಎಂದು ನನಗೆ ಗೊತ್ತಿಲ್ಲ.

ತಿಮ್ಮೇಗೌಡ ಮತ್ತು ಲಕ್ಷ್ಮಮ್ಮರವರು ತೀರಿಕೊಂಡ ನಂತರ ಅವರ ಕುಟುಂಬದ ಎಲ್ಲಾ ವ್ಯವಹಾರಗಳನ್ನು ಸಹ ಟಿ.ನಾಗೇಗೌಡರೇ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ಟಿ.ನಾಗೇಗೌಡರು ಯಾವ ಯಾವ ಸ್ವತ್ತುಗಳಿಗೆ ಸಂಬಂಧಿಸಿದಂತೆ ಏನೇನು ವ್ಯವಸ್ಥೆ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಟಿ ನಾಗೇಗೌಡರು ತನ್ನ ಅಕ್ಕ ತಂಗಿಯರಿಗೆ ಭಾಗ ಕೊಟ್ಟಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಟಿ.ನಾಗೇಗೌಡರ ಕುಟುಂಬದ ಆಂತರೀಕ ವ್ಯವಸ್ಥೆಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಟಿ.ನಾಗೇಗೌಡರ ಮಕ್ಕಳು ಟ್ರಾಕ್ಟರ್ ಮತ್ತು ಟಿಪ್ಪರ್ ಲಾರಿ ಓಡಿಸಿ ಸಂಪಾದನೆ ಮಾಡಿ ಟಿ.ನಾಗೇಗೌಡರಿಗೆ ಕೊಟ್ಟಿದ್ದಾರೆ. ನ್ಯಾಯಾಲಯದಲ್ಲಿ ಸಾಕ್ಷ್ಯ ನುಡಿಯಲು ನ್ಯಾಯಾಲಯದಿಂದ ನನಗೆ ಸಮನ್ಸ್ ಬಂದಿಲ್ಲ ಎಂದರೆ ಸರಿ. 3 ನೇ ಪ್ರತಿವಾದಿ ಶ್ರೀನಿವಾಸ ನನ್ನನ್ನು ನ್ಯಾಯಾಲಯದಲ್ಲಿ ಸಾಕ್ಷ್ಯ ನುಡಿಯಲು ಕರೆದುಕೊಂಡು ಬಂದಿದ್ದಾರೆ. ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರಿಕೆಯ ಮಾಹಿತಿಯನ್ನು ಶ್ರೀನಿವಾಸ ಕೊಟ್ಟಿದ್ದಾರೆ, ನಾನೇ ಕೊಟ್ಟಿದ್ದೇನೆ. ಟಿ.ನಾಗೇಗೌಡರ ಮಕ್ಕಳು ಟ್ರಾಕ್ಟರ್ ಮತ್ತು ಟಿಪ್ಪರ್ ಲಾರಿ ಓಡಿಸಿ ಸಂಪಾದನೆ ಮಾಡಿ ಟಿ.ನಾಗೇಗೌಡರಿಗೆ ಕೊಟ್ಟಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಿಗೂ ಮತ್ತು ಟಿ ನಾಗೇಗೌಡ ಮತ್ತು ಅವರ ಮಕ್ಕಳ ಟ್ರಾಕ್ಟರ್ ಹಾಗೂ ಟಿಪ್ಪರ್ ಲಾರಿಗಳಿಂದ ಬರುವ ಸಂಪಾದನೆಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ವಾದಿಗೆ ಭಾಗಾಂಶದ ಹಕ್ಕು ತಪ್ಪಿಸಲು ನಾನು ಟಿ.ನಾಗೇಗೌಡ ಹಾಗೂ ಅವರ ಮಕ್ಕಳ ಮಾತು ಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

**(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ ಓ ಹೇ ಸ ಒ**

**(ಬಾಬು ಎನ್)**
**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಪಾಂಡವಪುರ**